ಇ) ಪ್ರಸಕ್ತ 1994-95ನೇ ಸಾಲಿನಲ್ಲಿ ಸದರಿ ಯೋಜನೆಗೆ 275.00 ಲಕ್ಷ ರೂಪಾಯಿಗಳನ್ನು ನಿಗದಿಪಡಿಸಲಾಗಿದ್ದು, ಅದರಲ್ಲಿ 151.00 ಲಕ್ಷ ರೂಪಾಯಿಗಳಷ್ಟು ಹಣ ಖರ್ಚಾಗಿರುವುದಿಲ್ಲ.

ಈ) ಈ ಯೋಜನೆಯಿಂದ ಕೆಳಗೆ ಕಾಣಿಸಿದ ತಾಲ್ಲೂಕುಗಳು ನೀರಾವರಿಗೊಳಪಡುವವು.

1) ಬಸವನ ಬಾಗೇವಾಡಿ

2) ಜಮಖಂಡಿ

3) ಬಿಜಾಪುರ

ವಿಜಾಪುರ ಜಿಲ್ಲೆಯಲ್ಲಿ ಹೊಸ ಪೋಲೀಸ್ ಠಾಣೆಗಳನ್ನು ತೆರೆಯುವ ಬಗ್ಗೆ

992 - ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ ಹೊಸ ಪೋಲೀಸ್ ಠಾಣೆಗಳನ್ನು ತೆರೆಯುವ ಬಗ್ಗೆ ಸರಕಾರದವರು ಪರಿಶೀಲಿಸುವರೇ?

ಆ) ಹಾಗಿದ್ದಲ್ಲಿ ಅವು ಯಾವುವು?

ಇ) ವಿಜಾಪುರ ಜಿಲ್ಲೆಯ ಪೋಲೀಸ್ ಸಿಬ್ಬಂದಿಗಳಿಗೆ ವಸತಿ ಸೌಲಭ್ಯ ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ಹೌದು.

ಆ) ಸಿಂಧಗಿ ತಾಲ್ಲೂಕಿನ ಕಲಕೇರಿಯಲ್ಲಿ ಪೋಲೀಸ್ ಠಾಣೆ ತೆರೆಯವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದಿದೆ.

ಇ) ಹೌದು.

ಬೆಂಗಳೂರಿನ ಕಲಾಸಿಪಾಳ್ಯಂ ಬಸ್ ನಿಲ್ದಾಣ

489 - ಶ್ರೀ ಆರ್. ಕೃಷ್ಣಪ್ಪ, (ಜಯಮಹಲ್) : ಮಾನ್ಯ ಮುಖ್ಯಮುಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕಲಾಸಿಪಾಳ್ಯದ ಬಸ್‌ನಿಲ್ದಾಣವನ್ನು ಬೆಂಗಳೂರು ಮಹಾನಗರ ಪಾಲಿಕೆಯು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ವಹಿಸಲು ತೀರ್ಮಾನಿಸಿದೆಯೇ?

ಆ) ಹಾಗಿದ್ದಲ್ಲಿ, ಈ ಪ್ರದೇಶದ ವಿಸ್ತೀರ್ಣವೆಷ್ಟು ಹಾಗೂ ಈ ಜಾಗಕ್ಕೆ ಬದಲಾಗಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೇರೆ ಜಾಗವನ್ನು ನಗರಪಾಲಿಕೆಗೆ ನೀಡಲು ಒಪ್ಪಿದೆಯೇ?

ಇ) ಹಾಗಿದ್ದಲ್ಲಿ, ಅದರ ವಿವರಗಳನ್ನು ನೀಡುವುದು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು

ಆ) 2 ಎಕರೆ 30 ಗುಂಟೆ. ಹೌದು

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕಲಾಸಿಪಾಳ್ಯದ ಬಸ್ ನಿಲ್ದಾಣದ ಜಾಗಕ್ಕೆ ಬದಲಾಗಿ ದರ್ಮಾಬುಧಿ ರಸ್ತೆಯಲ್ಲಿ (ಲೋಕಮಾನ್ಯ ತಿಲಕ್ ಮಾರ್ಗ) ಇಷ್ಟೇ ವಿಸ್ತೀರ್ಣಕ್ಕೆ ಸಮಾಜದ ಜಮೀನನ್ನು ನಗರಪಾಲಿಕೆಗೆ ನೀಡಲು ಒಪ್ಪಿರುತ್ತದೆ.